

ಇದೆಲ್ಲ ಯಾವ ಕಾಲದ ಕಾಗಕ್ಕ ಗುಬ್ಬಕ್ಕನ ಕಥೆ? ಜಗತ್ತು ಮುಂದೆ ಮುಂದೆ ಸಾಗ್ತಿರುವಾಗ ನಮ್ಮನ್ನು ಹಿಮ್ಮುಖ ಚಲನೆಗೆ ದೂಡುತ್ತಿದ್ದಾನಲ್ಲ ಎನ್ನಿಸಿ ನನ್ನೊಳಗೆ ಆತನ ಬಗ್ಗೆ ಹುಚ್ಚು ಕೋಪ ಮೂಡಿತ್ತು. ಕಳೆದ ವರ್ಷ ಬಿ.ಎಸ್‌ಸಿ ಫೈನಲ್ ಇಯರ್‌ನಲ್ಲಿ ಫೇಲಾದಾಗ ಅಮ್ಮ ತಾತನಿಗೆ ನನ್ನ ಕೈ ತೋರಿಸಿ ಮುಂದಿನದನ್ನು ಹೇಳೆಂದಿದ್ದಳು. ಆಗ ಆತ–

"ನೋಡು ಮಗಳೇ... ನಾವೆಲ್ಲ ಭಿಕ್ಷುಕರು. ಅವನು ಕರೆದು ನೀಡಿದರೆ ಐತೆ; ಇಲ್ಲಾಂದರೆ ಇಲ್ಲ. ಕರೆಯುವವರೆಗೆ ಕಾಯುವುದು ಬಿಟ್ಟು ಬ್ಯಾರೆ ದಾರಿ ಇಲ್ಲ. ಹಂಗಿಗರಾದ ನಮಗ ಹಕ್ಕಿನ ಮಾತೇ ಇಲ್ಲವ್ವ. ಅವನ ಕರುಣ ಜಲ್ದಿ ಸಿಕ್ರೆ ಜಲ್ದಿ; ತಡಾಗಿ ಸಿಕ್ರೆ ತಡಾಗಿ. ಅದು ಬುಟ್ಟು ಇವಾಗೇ ಕೊಡು, ಇಷ್ಟೇ ಕೊಡು ಅಂತ ಒತ್ತಾಯ ಮಾಡಾಕಿಲ್ಲ. ತಡ ಆಗಬಹುದು, ಆದ್ರೆ ಸಿಕ್ಕೇಸಿಗ್ತಾದ. ಅವರವರ ಟೈಮಿಗೆ, ಅವರವರ ಭಾಗ್ಯದಷ್ಟು. ಆತಾದ ಎಲ್ಲ ಒಳ್ಳೇದಾತಾದ..."

ಈ ಮಾತು ನನ್ನ ಸಹನೆ ಪರೀಕ್ಷೆ ಮಾಡಿದಂತೆನಿಸಿತು. 'ಒಂದು ಹೇಳಪ ಅಂದ್ರೆ ಹನ್ನೆರಡು ಹೇಳೋನು ಇವನು, ದೊಡ್ಡ ತೀಸ್‌ಮಾರ್ಕ್‌' ಅಂದುಕೊಂಡವನೇ ನಾನು ತಿರುಗಿ ಹೇಳೇಬಿಟ್ಟೆ–

"ಕೈಲಾಗದ ಮೈಗಳ್ಳರಿಗೆ ಕರದು ಹಾಸಿಗಿ ಹಾಸಿ ಕೊಟ್ಟಂಗೈತಿದು. ನಾವು ಪ್ರಯತ್ನ ಮಾಡಿದ್ರೆ ಅವನೇನು ಅವನಪ್ಪ ಕೊಡ್ತಾನ. ಎಷ್ಟು ಮಂದಿ ಐಎಎಸ್ ಪಾಸಾಗ್ಯಾರ, ಎಂತೆಂಥ ಸಾಧನೆ ಮಾಡ್ಯಾರ. ದೇವರ ಕರುಣೆ ಐತೆಂತ ಓದ್ಲಾರ್ದ ಪರೀಕ್ಷೆ ಬರುದ್ರೆ ಪಾಸಾಗ್ತಾರ? ಓದಿ ಛಂದ ಬರದ್ರೂನೂ ಅವನ ಕರುಣೆ ಇಲ್ಲಂದ್ರೆ ಫೇಲಾಗಿ ಬುಡ್ತಾರಾ? ಈಗ ನಾನು ಚಾಲೆಂಜ್ ಮಾಡಿ ಹೇಳತೀನಿ, ಈ ಸಲ ನನ್ನ ರಿಜಲ್ಟ್ ಕ್ಲಿಯರ್ ಮಾಡಿಕಂಡೇ ಬರ್ತೀನಿ." ಅಮ್ಮ ಕೆಕ್ಕರಿಸಿ ನೋಡುತ್ತಿದ್ದುದನ್ನು ಒಪ್ಪರೆಗಣ್ಣಿಂದಲೇ ನೋಡಿಕೊಂಡಿದ್ದೆನಾಗಿ ಆಕೆಯ ಕಡೆ ನೋಡಲು ಹೋಗಲಿಲ್ಲ. ಅದಕ್ಕೆ ಆತ ಸ್ವಲ್ಪವೂ ಬೇಸರಿಸದೆ ನಿಧಾನವಾಗಿ ಆದರೆ ಅಷ್ಟೇ ಸ್ಪಷ್ಟವಾಗಿ–

"ನೋಡಪ್ಪ ಮಮ್ಮಗನೇ... ನಾನು ಮಾಡಿದೆ ಅಂಬದೆಲ್ಲ ಅಹಂಕಾರನೇ ಹೊರತು ನಿಜುವಲ್ಲ ತಿಳಕ. ನಾನು ಉಂಡೆ, ನಾನು ಮಕ್ಕಂಡೆ ಅಂತಿವಲ್ಲ. ಉಣದು, ಮಕ್ಕಂಬದು ನಾನೇ ಆಗಿದ್ರೆ

